## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 264/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ರಶ್ಮಿ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ನಾಗರಾಜು | | 20.09.2024 |
| ವಯಸ್ಸು | ಃ 27 ವರ್ಷ | | |
| ವೃತ್ತಿ | ಃ ಗೃಹಿಣಿ | ಪ್ರಾ.ಸಾ. | ಃ 07 |
| ವಾಸಸ್ಥಳ | ಃ ನಳನಹಳ್ಳಿ | ಚಾ.ಸಾ. | ಃ 10 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಮತುತ ನನ್ನ ಗಂಡ ನಳನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇವೆ. ನನ್ನ ಗಂಡ ಗಾರೆ ಕೆಲಸ ಮಾಡುತ್ತಿದ್ದು ನನ್ನ ಗಂಡನಿಗೆ 4-5 ವರ್ಷಗಳ ಹಿಂದೆ ಗೀತಾ ಇವರ ಪರಿಚಯವಾಗಿತ್ತು. ಗೀತಾ ಇವರು ಆಗಾಗ ತಮ್ಮ ಮನೆಗೆ ಬರುವಂತೆ ಕರೆಯುತ್ತಿದ್ದರು ಆದರೆ ಹೋಗಲು ಆಗಿರಲಿಲ್ಲ. ದಿಃ14.07.2023 ರಂದು ಸಂಜೆ 5 ಗಂಟೆಗೆ ನಾನು, ನನ್ನ ಗಂಡ, ನನ್ನ ಇಬ್ಬರು ಮಕ್ಕಳ ಜೊತೆ ಗೀತಾ ಇವರ ಮನೆಗೆ ಹೋಗಿದ್ದೆವು. ಆ ದಿನ ಅವರ ಮನೆಯಲ್ಲೇ ಉಳಿದುಕೊಂಡಿದ್ದೆವು. ಮರುದಿನ ಬೆಳಗ್ಗೆ ತಿಂಡಿ ತಿಂದು ಹೋಗಿ ಎಂದು ಹೇಳಿದ್ದರಿಂದ ನಾವು ಅಲ್ಲಿಯೇ ಇದ್ದೆವು ಅಷ್ಟರಲ್ಲಿ 8.30-9 ಗಂಟೆ ವೇಳೆಯಲ್ಲಿ ಹರ್ಷಿತಾಳ ಗಂಡ ಮಾದೇಶ ಅಲ್ಲಿಗೆ ಬಂದಿದ್ದರು. ಆ ಕಾಲಕ್ಕೆ ಗೀತಾ ಇವರು ಸಂತೋಷ್ ಎನ್ನುವವರ ಆಟೋದಲ್ಲಿ ಬಟ್ಟೆ ತೊಳೆಯಲು ಹೋಗಿದ್ದರು. 11.30 ಕ್ಕೆ ವಾಪಸ್ಸು ಬಂದಿದ್ದರು. ಅಷ್ಟರಲ್ಲಿ ನನ್ನ ಗಂಡ ಶ್ರೀರಂಗಪಟ್ಟಣಕ್ಕೆ

ಹೋಗಿದ್ದ. ಗೀತಾ ಇವರು ಬಟ್ಟೆ ತೊಳೆಯಲು ಹೋಗಿದ್ದಾಗಲೇ ಆರೋಪಿತ ಅವರ ಮನೆಗೆ ಬಂದಿದ್ದ. ಆ ಕಾಲಕ್ಕೆ ಅಭಿಮನ್ಯು ಎನ್ನುವವರು ಸಹ ಕನ್ನಡಿ ತಯಾರಿಸಲು ಅವರ ಮನೆಗೆ ಬಂದಿದ್ದರು. ಹರ್ಷಿತಾಳ ಗಂಡ ಮನೆಗೆ ಬಂದಾಗ ಹರ್ಷಿತಾಳೇ ಅವರನ್ನು ಮನೆ ಒಳಗಡೆ ಕರೆದಿದ್ದರು. ಹರ್ಷಿತಾಳೇ ಅವರು ತನ್ನ ಗಂಡ ಎಂದು ನನಗೆ ಪರಿಚಯ ಮಾಡಿಸಿದ್ದಳು. ಆಗ ಹರ್ಷಿತಾ ತನ್ನ ಗಂಡನಿಗೆ ಟೀ ಕೊಟ್ಟಿದ್ದಳು. ನಂತರ ಗೀತಾ ಬಟ್ಟೆ ಒಣಗಿ ಹಾಕಲು ಮನೆಯಿಂದ ಹೊರಗೆ ಹೋಗಿದ್ದಳು. ನಂತರ ಹರ್ಷಿತಾ ಸಹ ಅವರ ತಾಯಿ ಜೊತೆ ಬಟ್ಟೆ ಒಣಗಿ ಹಾಕಲು ಹೋಗಿದ್ದಳು. ಆಗ ನಾನು ಸಹ ಬಟ್ಟೆ ಒಣಗಿ ಹಾಕಲು ಹೋಗಿದ್ದೆ. ನಂತರ ಹರ್ಷಿತಾಳ ಗಂಡ ಮನೆ ಹೊರಡೆ ಬಂದು ಹರ್ಷಿತಾಳಿಗೆ ಬಾ ಊರಿಗೆ ಹೋಗೋಣ ಎಂದು ಕರೆದಿದ್ದ. ಆಗ ಹರ್ಷಿತಾ ನಿನ್ನ ಅಣ್ಣ, ಅತ್ತಿಗೆ ಮತ್ತು ಅಮ್ಮನನ್ನು ಕರೆದುಕೊಂಡು ಬಾ ಎಂದು ಹೇಳಿದ್ದಳು. ಆ ಕಾಲಕ್ಕೆ ನಾನು, ಭವ್ಯ, ಸಂಗೀತಾ, ಹರ್ಷಿತಾ ಅವರ ಮನೆಯ ಮುಂಭಾಗದಲ್ಲಿರುವ ಸಿಮೆಂಟ್ ಇಟ್ಟಿಗೆ ಮೇಲೆ ಕುಳಿತಿದ್ದೆವು. ಆಗ ಹರ್ಷಿತಾ ಗಂಡ ಹರ್ಷಿತಾಳ ಕೂದಲು ಹಿಡಿದುಕೊಂಡು ಚಾಕುವಿನಿಂದ ಹರ್ಷಿತಾಳ ಬಲ ಭುಜ, ಕತ್ತು ಮತ್ತು ಹೊಟ್ಟೆಗೆ ಚುಚ್ಚಿದ್ದ. ಆಗ ನಾವೆಲ್ಲರೂ ಬಿಡಿಸಲು ಪ್ರಯತ್ನ ಮಾಡಿದ್ದೆವು ಆಗ ಗೀತಾ ಇವರಿಗೂ ಸಹ ಚಾಕುವಿನಿಂದ ಕೈಗಳಿಗೆ ಚುಚ್ಚಿದ್ದ. ನಾವು ಬಿಡಿಸಿಕೊಳ್ಳಲು ಹೋದಾಗ ಆರೋಪಿ ಹರ್ಷಿತಾಳ ಕೂದಲನ್ನು ಹಿಡಿದುಕೊಂಡು ದೂರ ಎಳೆದುಕೊಂಡು ಹೋಗಿದ್ದ. ಆ ಗಲಾಟೆ ಕಾಲಕ್ಕೆ ಗಲಾಟೆ ಕೇಳಿ ಸಂತೋಷ್ ಮತ್ತು ಅಭಿಮನ್ಯು ಸಹ ಬಂದು ಆರೋಪಿತನಿಗೆ ಎರಡು ಏಟು ಹೊಡೆದಿದ್ದರು. ಆರೋಪಿತ ಚುಚ್ಚಿದ್ದ ಚಾಕು ಹರ್ಷಿತಾಳ ಹೊಟ್ಟೆಯಲ್ಲಿ ಉಳಿದಿದ್ದರಿಂದ ಹರ್ಷಿತಾ ಅದನ್ನು ಕಿತ್ತು ಎಸೆದಿದ್ದರು. ನಂತರ ಹರ್ಷಿತಾಳನ್ನು ಸಂಗೀತ ಮತ್ತು ಗೀತಾ ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ಹರ್ಷಿತಾ

ಮರಣಹೊಂದಿದ್ದಾಳೆ ಎಂದು ಗೊತ್ತಾಗಿತ್ತು. ಮದ್ಯಾಹ್ನ 12 ಗಂಟೆಗೆ ಆ ಘಟನೆ ನಡೆದಿತ್ತು. ಈ ಬಗ್ಗೆ ನನ್ನ ಹೇಳಿಕೆ ಕೊಟ್ಟಿದ್ದೇನೆ. ಈ ಹೇಳಿಕೆ ಕೊಟ್ಟ ಬಗ್ಗೆ ನಾನು ಸಹಿ ಮಾಡಿದ್ದೇನೆ. ಈಗ ನಾನು ನೋಡುತ್ತಿರುವ ದಾಖಲೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ನೋಟಿಸ್ ಇದ್ದು ಅದನ್ನು ನಿ.ಪಿ–17 ಮತ್ತು ಸಹಿಯನ್ನು ನಿ.ಪಿ–17(ಎ) ಎಂದು ಗುರುತಿಸಿದೆ. ನ್ಯಾಯಾಧೀಶರ ಮುಂದೆ ಸಹ ನನ್ನ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿ.ಪಿ–18 ಮತ್ತು ಸಹಿಯನ್ನು ನಿ.ಪಿ–18(ಎ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎಂ.ಒ-1 ಚಾಕು ಆ ದಿನ ಹರ್ಷಿತಾಳ ಗಂಡ ಹರ್ಷಿತಾಳಿಗೆ ಚುಚ್ಚಿದ್ದ ಚಾಕು ಇರುತ್ತದೆ. ಕೋರ್ಟ್ ಮುಂದೆ ಇರುವ ಆರೋಪಿತನೇ ಹರ್ಷಿತಾಳ ಗಂಡನಿರುತ್ತಾನೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಯಿತು</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು